**ದಿನಾಂಕ: 02-07-2022 ರಂದು 10-00 ಗಂಟೆಗೆ ಡಾ. ಸುರೇಶ್, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-179 (ಶಾಖಾಂಬರಿನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್-179ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 179ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಜೆ.ಪಿ.ನಗರ ಬೆಸ್ಕಾಂ ಅಭಿಯಂತರರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| ಸದಸ್ಯರುಗಳು | ಅರಣ್ಯ ಸಂರಕ್ಷಣಾಧಿಕಾರಿಗಳು |
| ಸದಸ್ಯರುಗಳು | ಬೀದಿ ದೀಪ ನಿರ್ವಹಣಾ ಅಭಿಯಂತರರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ರಸ್ತೆ ಮೂಲಭೂತ ಸೌಕರ್ಯ (ದಕ್ಷಿಣ) |
| ಸದಸ್ಯರುಗಳು | ಯೋಜನೆ (ದಕ್ಷಿಣ) |
| ಸದಸ್ಯರುಗಳು | ಠಾಣಾಧಿಕಾರಿಗಳು, ನ್ಯಾಯ ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ |
| ಸದಸ್ಯರುಗಳು | ಬೃಹತ್ ನೀರುಗಾಲುವೆ ಅಭಿಯಂತರರು |
| ಸದಸ್ಯರುಗಳು | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| ಸದಸ್ಯರುಗಳು | ನಾಗರೀಕ ಕಲ್ಯಾಣ ಸಂಘ |

## :ನಡಾವಳಿಯ ವರದಿ:

➢ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಮನೋಹರ್ .ಡಿ, ಸಹಾಯಕ ಅಭಿಯಂತರರು ವಾರ್ಡ್ 179 ಶಾಖಾಂಬರಿನಗರ, ಜೆ.ಪಿ.ನಗರ ಉಪವಿಭಾಗ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

➢ ಕಾಲರ ರೋಗ ಹೆಚ್ಚಾಗುತ್ತಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕದ ನೀರನ್ನು ಪರಿವೀಕ್ಷಿಸುವ ಬಗ್ಗೆ ಹಾಗೂ ಕಸದ ಗಾಡಿಯ ಮೈಕಿನಿಂದ ಕಾಲರ ರೋಗದ ಬಗ್ಗೆ ಅರಿವು ಮೂಡಿಸುವಂತೆ ಚರ್ಚಿಸಲಾಯಿತು. **ಕ್ರಮ :- ಬಿಡಬ್ಲ್ಯೂಎಸ್ಎಸ್‌ಬಿ, ಜೆ.ಪಿ.ನಗರ ಹಾಗೂ ಸ.ಕಾ.ನಿ.ಅ., ಎಸ್‌ಡಬ್ಲ್ಯೂಎಂ.**

*ಪು.ತಿ.ನೋ.*

- ಪೌರ ಕಾರ್ಮಿಕರಲ್ಲಿ Shredder Machine ಹಾಳಾಗಿದ್ದು, ಕೂಡಲೇ ರಿಪೇರಿ ಮಾಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲು ಕೋರಲಾಯಿತು.

**ಕ್ರಮ :- ಸ.ಕಾ.ನಿ.ಅ., ಎಸ್.ಡಬ್ಲ್ಯೂ.ಎಂ., ಜಯನಗರ ವಿಭಾಗ**

- ಒಣ ಕಸ ಮತ್ತು ಹಸಿ ಕಸ ವಿಂಗಡಣೆ ಮಾಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಹಾಗೂ 5ನೇ ಬಡಾವಣೆ ಜಯನಗರದಲ್ಲಿ ಪೌರ ಕಾರ್ಮಿಕರುಗಳ ಕೊರತೆಯಿದ್ದು, ಕಸವನ್ನು ತೆರವುಗೊಳಿಸಲು ತೊಂದರೆಯಾಗುತ್ತಿರುವ ಬಗ್ಗೆ, ಮೇಜರ್(ಮೆಟ್ರೋ)ರಸ್ತೆಗಳಲ್ಲಿ ಮೆಕ್ಯಾನಿಕಲ್ ಸ್ವೀಪರ್‌ಗಳು ಕಾರ್ಯನಿರ್ವಹಿಸುತ್ತಿರದ ಬಗ್ಗೆ ಚರ್ಚಿಸಲಾಯಿತು.

**ಕ್ರಮ :- ಸ.ಕಾ.ನಿ.ಅ., ಎಸ್.ಡಬ್ಲ್ಯೂ.ಎಂ.,**

- 3ನೇ ಮುಖ್ಯರಸ್ತೆ, 8ನೇ ಬಡಾವಣೆ ಜಯನಗರದಲ್ಲಿ ಕುಡಿಯುವ ನೀರಿನ ಪೈಪ್ ಹಾಳಾಗಿದ್ದು, ನೀರು ಹೊರಹೊಮ್ಮುತ್ತಿದ್ದು, ಕೂಡಲೇ ಸರಿಪಡಿಸುವಂತೆ ಚರ್ಚಿಸಲಾಯಿತು.

**ಕ್ರಮ :- ಬಿಡಬ್ಲ್ಯೂಎಸ್‌ಎಸ್‌ಬಿ, ಜೆ.ಪಿ.ನಗರ**

- ಲಕ್ಷ್ಮಣರಾವ್ ಬುಲೇವಾರ್ಡ್ ಉದ್ಯಾನವನದಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಕೂಡಲೇ ಸರಿಪಡಿಸುವಂತೆ ಚರ್ಚಿಸಲಾಯಿತು.

**ಕ್ರಮ :- ತೋಟಗಾರಿಕೆ ಇಲಾಖೆ (ದಕ್ಷಿಣ)**

- ಬೀದಿ ಬದಿ ಹಣ್ಣು ವ್ಯಾಪಾರ ಮಾಡುವವರು ಹಣ್ಣುಗಳನ್ನು ಕತ್ತರಿಸಿ ಗಾಜಿನ ಡಬ್ಬದಲ್ಲಿ ಶೇಖರಿಸಿ ಮಾರುವಂತೆ ಸೂಚಿಸುವಂತೆ, ಇಲ್ಲವಾದಲ್ಲಿ ದಂಡ ವಿಧಿಸುವ ಬಗ್ಗೆ ಚರ್ಚಿಸಲಾಯಿತು.

**ಕ್ರಮ :- ಆರೋಗ್ಯ ಇಲಾಖೆ**

- 7ನೇ ಮುಖ್ಯರಸ್ತೆ, 28ನೇ ಅಡ್ಡರಸ್ತೆ, 5ನೇ ಬ್ಲಾಕ್ ಜಯನಗರದ ಅಕ್ಕ-ಪಕ್ಕದ ನಿವೇಶನದವರು ಪಾದಚಾರಿ ಮಾರ್ಗದ ಮೇಲೆ ಕಸವನ್ನು ತಂದು ಹಾಕುತ್ತಿದ್ದು, ಇದರಿಂದಾಗಿ ಕಸ ವಿಲೇವಾರಿ ಮಾಡದೇ ಅಲ್ಲಿಯೇ ಬಿಟ್ಟಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಮಾರ್ಷಲ್‌ರವನ್ನು ನೇಮಿಸುವಂತೆ ಚರ್ಚಿಸಲಾಯಿತು.

**ಕ್ರಮ :- ಸ.ಕಾ.ನಿ.ಅ., ಎಸ್.ಡಬ್ಲ್ಯೂ.ಎಂ.**

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಇದೇ ರೀತಿಯಾಗಿ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಜೆ.ಪಿ.ನಗರ) ಉಪವಿಭಾಗದ ಶ್ರೀ ಮನೋಹರ್ ಡಿ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು ವಾರ್ಡ್ 179**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**